**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**ಪ್ರಕರಣದ ಸಂಖ್ಯೆ MVC–992/2020**

ದಿನಾಂಕ 26–07–2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಃ | ಡಾ. ಆನಂದ ಮಂಗಲಗಿ PW–2 |
| ತಂದೆಯ ಹೆಸರು | ಃ | ರಾಮಶೆಟ್ಟಿ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ದಂತ ತಜ್ಞರು |
| ವಾಸಸ್ಥಳ | ಃ | ಕಲಬುರಗಿ |

**ಮುಖ್ಯ ವಿಚಾರಣೆ ಶ್ರೀ ಎಸ್ ಎ ಕೆ ಅರ್ಜಿದಾರರ ಪರ ವಕೀಲರಿಂದ**

ಅರ್ಜಿದಾರರು ಕಾಮರೆಡ್ಡಿ ಆಸ್ಪತ್ರೆಗೆ 2020 ರಲ್ಲಿ ಚಿಕಿತ್ಸೆಗಾಗಿ ಬಂದಿದ್ದರು ಅವರಿಗೆ manduble fracture ಹಾಗೂ ಹಲ್ಲುಗಳಲ್ಲಿ fracture ಆಗಿತ್ತು. ಅರ್ಜಿದಾರರ ದವಡೆ ಅಲುಗಾಡುತ್ತಿತ್ತು. ಅದಕ್ಕೆ ಶಸ್ತ್ರಚಿಕಿತ್ಸೆ (Open reduction with internal fixation under general anesthesia ಮಾಡಿರುತ್ತೇನೆ. ಅರ್ಜಿದಾರನಿಗೆ ಹಲ್ಲುಗಳಲ್ಲಿ fracture ಆಗಿ ನೋವು ಇತ್ತು. ಅರ್ಜಿದಾರ ನನ್ನ ಶ್ರೀ ಸಾಯಿ ಮಲ್ಟಿಸ್ಪೆಷಾಲಿಟಿ ಡೆಂಟಲ್ ಕ್ಲಿನಿಕ್ ಗೆ ಚಿಕಿತ್ಸೆಗಾಗಿ 2020 ರಲ್ಲಿ ಬಂದಿದ್ದ.

ಸಾಕ್ಷಿಗೆ ನಿಪಿ–9 ರ ಕ್ಯಾಶ್ ರಸೀದಿಯನ್ನು ನೋಡಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಸಾಕ್ಷಿ ಸಹಿಯನ್ನು ನಿಪಿ–9(ಎ) ಎಂದು ಗುರುತಿಸಲಾಯಿತು.

ಅರ್ಜಿದಾರನಿಗೆ ಘನ ಆಹಾರ ಸೇವಿಸಲು ಹಾಗೂ ಹಲ್ಲಿನಿಂದ ಜಗಿಯಲು ತೊಂದರೆ ಆಗುತ್ತಿತ್ತು. ಆದರೆ ಅದಕ್ಕೆ ಯಾವುದೇ ಅಂಗನ್ಯೂನ್ಯತೆ ಬರುವುದಿಲ್ಲ.

**ನ್ಯಾಯಾಲಯದ ಪ್ರಶ್ನೆ :** **ಮೇಲೆ ಹೇಳಿದ ನೋವು ಹಾಗೂ ಗಾಯಗಳು ಅರ್ಜಿದಾರರ ಕೆಲಸ ಮಾಡುವ ಸಾಮರ್ಥ್ಯದ ಮೇಲೆ ಯಾವುದಾದರೂ ಪ್ರಭಾವ ಬೀರುತ್ತದೇಯೇ?**

**ಸಾಕ್ಷಿಯ ಉತ್ತರ :** **ಪ್ರಭಾವ ಬೀಡುವುದಿಲ್ಲ.**

**ಪಾಟಿ ಸವಾಲುಃ 2 ನೇ ಎದುರುದಾರ ಪರ ಶ್ರೀ ವಿ.ಸಿ.ಎಂ.ಪಿ. ವಕೀಲರಿಂದಃ**

ನಾನು Maxillofacial Surgeon ತಜ್ಞ ಆಗಿರುತ್ತೇನೆ. ಸುಮಾರು 4-5 ದಿನಗಳ ಹಿಂದೆ ಕಲ್ಬುರ್ಗಿ ಕೋರ್ಟ್ ಸಿಬ್ಬಂದಿಯಾದ ಏಜಾಜ್ ಎಂಬುವವರು ಜಿಲ್ಲಾ ನ್ಯಾಯಾಲಯಕ್ಕೆ ಸಮನ್ಸ್ ಪಡೆಯಲು ಬರುವಂತೆ ಹೇಳಿರುತ್ತಾರೆ. ನಾನು ಅರ್ಜಿದಾರರಿಗೆ 2020 ನೇ ಸಾಲಿನ 9 ನೇ ತಿಂಗಳಿನಲ್ಲಿ ಹಲ್ಲುಗಳಿಗೆ ಸಂಬಂಧಿಸಿದಂತೆ ಚಿಕಿತ್ಸೆ ನೀಡಿರುತ್ತೇನೆ. ಅರ್ಜಿದಾರರು ನನ್ನ ಕ್ಲಿನಿಕ್ ಗೆ ಬಂದು ಚಿಕಿತ್ಸೆ ಪಡೆದುಕೊಂಡ ಬಗ್ಗೆ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಆದರೆ ನನ್ನ ಬಳಿ ಇವೆ.

ನಿಪಿ-9 ರ ಬಿಲ್ಲಿನಲ್ಲಿ 1 ಲಕ್ಷ 5 ಸಾವಿರ ರೂಪಾಯಿ ಅಂತಾ ನಮೂದಿಸಿದ್ದು ಸದರಿ ಹಣವನ್ನು ಯಾವ್ಯಾವ ಚಿಕಿತ್ಸೆ ನೀಡಿದ ಬಗ್ಗೆ ಹಾಗೂ ಯಾವ್ಯಾವ ಶಸ್ತ್ರ ಚಿಕಿತ್ಸೆ ಮಾಡಿದ ಬಗ್ಗೆ ವಿವರ ಇಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಅರ್ಜಿದಾರರ ರೂಟ್ ಕಿನಾಲ್ ಗೆ, ಕ್ರೌನ್ಸ್ ಅಂಡ್ ಬ್ರಿಜೆಸ್, ವೈರಿಂಗ್, ಸ್ಟಿಂಟಿಂಗ್ ಗೆ ಅಷ್ಟ ಹಣ ಪಡೆದಿರುತ್ತೇನೆ. ಅದರ ವಿವರವನ್ನು ನ್ಯಾಯಾಲಯಕ್ಕೆ ನೀಡಬಲ್ಲೆ. ನಾವು ರೋಗಿಗಳಿಂದ ಪಡೆದಂತಹ ಫೀಸನ್ನು professional fees ಅಂತಾ ನಮ್ಮ ಆದಾಯ ತೆರಿಗೆಯಲ್ಲಿ ತೋರಿಸಿರುತ್ತೇವೆ. ನಿಪಿ-9 ರ ದಾಖಲೆ ಬಿಲ್ ಆಗಿಲ್ಲ ರಸೀದಿ ಆಗಿದೆ ಎಂದರೆ ಸಾಕ್ಷಿ ನಾನು ಅರ್ಜಿದಾರರಿಂದ ಚಿಕಿತ್ಸೆಗೆ ಪಡೆದ ಹಣದ ರಸೀದಿ ಆಗಿದೆ ಎಂದು ನುಡಿಯುತ್ತಾರೆ.

ನಾವು ರೋಗಿಗಳಿಂದ ಪೀಸು ಹಾಗೂ ಕ್ಲಿನಿಕ್/OPD ವೆಚ್ಚವನ್ನು ಪಡೆದ ನಂತರ ರೋಗಿಗಳಿಗೆ ನೀಡಿದ ರಸೀದಿಯಲ್ಲಿ GST & CST ಸಂಖ್ಯೆ ನಮೂದು ಮಾಡುವುದಿಲ್ಲ. ಸಾಕ್ಷಿ ಮುಂದುವರೆದು ಅಲ್ಲಿನ ಆಸ್ಪತ್ರೆಗಳಲ್ಲಿ GST & CST ಸಂಖ್ಯೆ ಯಾರೂ ಕೂಡ ನಮೂದು ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆದಾಯ ತೆರಿಗೆ ಇಲಾಖೆಗೆ ಆದಾಯ ತೆರಿಗೆ ಪಾವತಿಸಬೇಕಾಗುತ್ತದೆ ಎಂದು ನಿಪಿ-9 ರಲ್ಲಿ GST & CST ಸಂಖ್ಯೆ ನಮೂದಿಸದೇ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾರ್ಷಿಕವಾಗಿ professional fees ತುಂಬುತ್ತೇನೆಂದು ನುಡಿಯುತ್ತಾರೆ. professional fees ತೆಗೆದುಕೊಳ್ಳಬೇಕಾಗದರೆ GST & CST ಕರ ಕಟ್ಟಬೇಕಾಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿಗೆ ಪರಿಹಾರ ಧನ ಸಿಗುವ ಸಲುವಾಗಿ ನಿಪಿ-9 ರ ದಾಖಲಾತಿಯಲ್ಲಿ 1 ಲಕ್ಷ 5 ಸಾವಿರ ಹಣ ಪಡೆದಿರುವುದಾಗಿ ಸುಳ್ಳು ದಾಖಲಾತಿಯನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು
ಜೇವರ್ಗಿ